# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

**ಸಿ ಎಸ್ ಸುಧೀರ್,** ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.

ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianMoney.com

### ಎಚ್ಚರ ತಪ್ಪಿದ್ರೆ ಶೂಲವಾಗುತ್ತೆ ಪರ್ಸನಲ್ ಲೋನ್

**1.) ನನ್ನ ಹೆಸರು ದೀಪಕ್. ಮಂಡ್ಯದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಇತ್ತೀಚೆಗೆ ನನ್ನ ಸ್ನೇಹಿತನೊಬ್ಬ ವೈಯಕ್ತಿಕ ಸಾಲ ಪಡೆದು ಸಂಕಷ್ಟ ಅನುಭವಿಸಿದ ಬಗ್ಗೆ ಹೇಳುತ್ತಿದ್ದ. ವೈಯಕ್ತಿಕ ಸಾಲ ಎಂದರೇನು? ಯಾವ ಸಂದರ್ಭದಲ್ಲಿ ವೈಯಕ್ತಿಕ ಸಾಲ (ಪರ್ಸನಲ್ ಲೋನ್) ಪಡೆಯುವುದು ಸೂಕ್ತ.**

ಸರಿಯಾದ ಮಾಹಿತಿ ಪಡೆಯದೆ ಸಾಲ ಪಡೆದರೆ ಸಮಸ್ಯೆಗೆ ಸಿಲುಕುವುದು ನಿಶ್ಚಿತ. ವೈಯಕ್ತಿಕ ಸಾಲವನ್ನು ತುರ್ತು ಆರ್ಥಿಕ ಅಗತ್ಯಗಳಿಗೆ ಮಾತ್ರ ಪಡೆದುಕೊಳ್ಳಬೇಕು. ವೈಯಕ್ತಿಕ ಸಾಲದ ಬಡ್ಡಿದರ ಗೃಹ ಸಾಲದ ಬಡ್ಡಿದರಕ್ಕೆ ಹೋಲಿಸಿದಲ್ಲಿ ದುಬಾರಿ. ಗೃಹ ಸಾಲದ ಈಗಿನ ಬಡ್ಡಿದರ ಶೇ.8.5 ರಷ್ಟಿದೆ. ಆದರೆ ವೈಯಕ್ತಿಕ ಸಾಲದ ಬಡ್ಡಿ ದರ ಶೇ.13 ರಿಂದ ಶೇ.16 ರಷ್ಟಿದೆ. ಹಾಗಾಗಿ ವೈಯಕ್ತಿಕ ಸಾಲ ಪಡೆಯುವುದು ನಿಮ್ಮ ಕಟ್ಟಕಡೆಯ ಆಯ್ಕೆಯಾಗಿರಬೇಕು. ವೈಯಕ್ತಿಕ ಸಾಲ ಎಂದರೆ ಹೆಸರೇ ಹೇಳುವಂತೆ ವೈಯಕ್ತಿಕ ಬಳಕೆಗೆ ಬ್ಯಾಂಕಿನಿಂದ ತೆಗೆದುಕೊಳ್ಳುವ ಸಾಲ. ನೀವು ಉದ್ಯೋಗದಲ್ಲಿದ್ದ ಪಕ್ಷದಲ್ಲಿ ಮಾಸಿಕ ವೇತನ ಪರಿಗಣಿಸಿ ಅಥವಾ ಸ್ವಯಂ ಉದ್ಯೋಗ ಮಾಡುತ್ತಿದ್ದಲ್ಲಿ ಆದಾಯ ಗಣನೆಗೆ ತೆಗೆದುಕೊಂಡು ಈ ಸಾಲ ನೀಡಲಾಗುತ್ತದೆ. ಯಾವ ಉದ್ದೇಶಕ್ಕೆ ನೀವು ಈ ಸಾಲ ಬಳಸಿದರೂ ಬ್ಯಾಂಕ್ ಪ್ರಶ್ನಿಸುವುದಿಲ್ಲ. ವಿವಾಹದ ಖರ್ಚಿಗೆ, ಬೇರೆಯವರಿಂದ ಪಡೆದ ಸಾಲ ತೀರಿಸಲು. ಅನಾರೋಗ್ಯದ ಪರಿಸ್ಥಿತಿಯಲ್ಲಿ ಹಣಕಾಸು ಮುಗ್ಗಟ್ಟು ನಿಭಾಯಿಸಲು, ಗೃಹ ಸಾಲದ ಡೌನ್‌ಪೇಮೆಂಟ್ ಮಾಡಲು ಅಥವಾ ಇತ್ಯಾದಿ ವೆಚ್ಚಗಳಿಗೆ ಈ ಹಣ ಉಪಯೋಗಿಸಬಹುದು. ಆದರೆ ವಿವೇಚನೆ ಬಳಸದೆ ವೈಯಕ್ತಿಕ ಸಾಲ ಮಾಡಿದರೆ ನೀವು ಸಾಲದ ಶೂಲಕ್ಕೆ ಸಿಲುಕುವುದು ನಿಶ್ಚಿತ. ಪರ್ಸನಲ್ ಲೋನ್‌ಗಾಗಿ ಯಾವ ಬ್ಯಾಂಕಿನಲ್ಲಿ ನಿಮ್ಮ ಸ್ಯಾಲರಿ ಅಕೌಂಟ್ ಇರುತ್ತದೆಯೋ, ಅಲ್ಲಿ ಅರ್ಜಿ ಸಲ್ಲಿಸುವುದು ಉತ್ತಮ. ಸಾಮಾನ್ಯವಾಗಿ ಬ್ಯಾಂಕ್ ಗಳು ತಮ್ಮಲ್ಲಿ ಸ್ಯಾಲರಿ ಅಕೌಂಟ್ ಇರದ ಗ್ರಾಹಕರಿಗೆ ವೈಯಕ್ತಿಕ ಸಾಲ ಕೊಡುವುದಿಲ್ಲ. ಪರ್ಸನಲ್ ಲೋನ್‌ಗೆ ಮರುಪಾವತಿಯ ಅವಧಿ ಸಾಮಾನ್ಯವಾಗಿ 12ರಿಂದ60 ತಿಂಗಳುಗಳ ತನಕ ಇರುತ್ತದೆ. 21ರಿಂದ58 ವರ್ಷದ ವ್ಯಕ್ತಿಗಳಿಗೆ ವೈಯಕ್ತಿಕ ಸಾಲ ದೊರೆಯುತ್ತದೆ. ಇದಕ್ಕೆ ಕನಿಷ್ಠ ದಾಖಲೆಗಳು ಸಾಕು. ವಿಳಾಸ, ಗುರುತು, ವಯಸ್ಸಿನ ಪ್ರಮಾಣಪತ್ರ, ಕಳೆದ 6 ತಿಂಗಳಿನ ಬ್ಯಾಂಕ್ ಸ್ಟೇಟ್‌ಮೆಂಟ್, ಕಳೆದ 3 ತಿಂಗಳಿನ ಪೇ ಸ್ಲಿಪ್ ಇತ್ಯಾದಿ ಸಾಕು. ಪರ್ಸನಲ್ ಲೋನ್ ನ ಸಾಮಾನ್ಯ ಲೆಕ್ಕಾಚಾರವನ್ನು ಕೆಳಗಿನ ಪಟ್ಟಿಯಲ್ಲಿ ಗಮನಿಸಿ.

**ವೈಯಕ್ತಿಕ ಸಾಲದ (ಪರ್ಸನಲ್ ಲೋನ್) ಬಡ್ಡಿ ಮತ್ತು ಮಾಸಿಕ ಕಂತಿನ ಲೆಕ್ಕಾಚಾರ**

| ಸಾಲದ ಮೊತ್ತ | ಬಡ್ಡಿ ದರ | ಅವಧಿ | ಮಾಸಿಕ ಕಂತು (ಇಎಂಐ) | 10 ಲಕ್ಷ ಸಾಲಕ್ಕೆ ನೀವು ಕಟ್ಟುವ ಒಟ್ಟು ಬಡ್ಡಿ |
|---|---|---|---|---|
| 10ಲಕ್ಷ | ಶೇ.13 | 60 ತಿಂಗಳು | ರೂ. 22,754 | ರೂ. 3,65,185 |
| 10ಲಕ್ಷ | ಶೇ.14 | 60 ತಿಂಗಳು | ರೂ. 23,265 | ರೂ. 3,96,096 |
| 10ಲಕ್ಷ | ಶೇ.15 | 60 ತಿಂಗಳು | ರೂ. 23,790 | ರೂ. 4,27,396 |
| 10ಲಕ್ಷ | ಶೇ.16 | 60 ತಿಂಗಳು | ರೂ. 24,319 | ರೂ. 4,59,089 |

**ಸೂಚನೆ– ಇದು ಸಾಮಾನ್ಯ ಅಂದಾಜು ಪಟ್ಟಿ. ವಾಸ್ತವದಲ್ಲಿ ಕೆಲ ಬದಲಾವಣೆಗಳಿರಬಹುದು.**

**2.) ನಾನು ಹುಬ್ಬಳ್ಳಿಯ ನಿವಾಸಿ ಪ್ರಭುಲಿಂಗ ಪಾಟೀಲ್. 50 ವರ್ಷ ವಯಸ್ಸಿನ ನನಗೆ ಇಬ್ಬರು ಮಕ್ಕಳಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ತುರ್ತು ಹಣ ಅಗತ್ಯವಿದ್ದ ಕಾರಣ ಆಸ್ತಿಯನ್ನು ಆಧಾರವನ್ನಾಗಿಸಿ ಸಾಲ ಪಡೆದಿದ್ದೆ. ಸಾಲದ ಹಣದಲ್ಲಿ ಮಗನ ಇಂಜಿನಿಯರಿಂಗ್ ಗೆ ಅಗತ್ಯವಿದ್ದ ಶುಲ್ಕ ಕಟ್ಟಿದ್ದೇನೆ. ಶಿಕ್ಷಣ ಸಾಲಕ್ಕೆ ಬಡ್ಡಿಯ ಮೇಲೆ ತೆರಿಗೆ ವಿನಾಯಿತಿ ಇದೆ ಎಂದು ಕೇಳಿದ್ದೇನೆ. ನಾನು ಶಿಕ್ಷಣ ಸಾಲ ಪಡೆಯದಿದ್ದರೂ ತೆರಿಗೆ ವಿನಾಯಿತಿ ಪಡೆಯಬಹುದೇ?**

ಪ್ರಭುಲಿಂಗ ಪಾಟೀಲರೇ ಬಹಳ ಉತ್ತಮವಾದ ಪ್ರಶ್ನೆ ಕೇಳಿದ್ದೀರಿ. ಮಗನ ಉನ್ನತ ವಿದ್ಯಾಭ್ಯಾಸಕ್ಕಾಗಿ ನೀವು ಮಾಡುತ್ತಿರುವ ಪ್ರಯತ್ನ ಸಫಲವಾಗಲಿ. ನಿಮ್ಮ ಪ್ರಶ್ನೆಗೆ ಉತ್ತರಿಸುವ ಮುನ್ನ ಶಿಕ್ಷಣ ಸಾಲಕ್ಕೆ ಸಿಗುವ ತೆರಿಗೆ ವಿನಾಯಿತಿಯ ಬಗ್ಗೆ ತಿಳಿಸಿಕೊಡುತ್ತೇನೆ. ನಿಮ್ಮ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಾಲ ಪಡೆದಿದ್ದಲ್ಲಿ, ನಿಮಗೆ ಕಾಲಂ 80 ಇ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಸಾಲವನ್ನು ಮಗನ ಹೆಸರಿನಲ್ಲಿ ಪಡೆದಿದ್ದಲ್ಲಿ ಅವರೇ ವಿನಾಯಿತಿಗಾಗಿ ಕ್ಲೇಮ್ ಅರ್ಜಿ ಸಲ್ಲಿಸಬೇಕು. ಆಯಾ ಆರ್ಥಿಕ ವರ್ಷದಲ್ಲಿ ಪಾವತಿಸಿದ ಇಎಂಐನ ಒಟ್ಟಾರೆ ಬಡ್ಡಿಯ ಭಾಗಕ್ಕಾಗಿ ಈ ವಿನಾಯಿತಿ ಲಭ್ಯವಿದೆ. ಇನ್ನು ಪ್ರಶ್ನೆಯಲ್ಲಿ ಕೇಳಿರುವಂತೆ ನೀವು ಪಡೆದಿರುವ ಸಾಲ ಶಿಕ್ಷಣ ಸಾಲವಲ್ಲದೇ ಇದ್ದರೂ 80 ಇ ಅಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹರಾಗಿರುವಿರಿ. ಆದರೆ ಅದನ್ನು ಪಡೆಯಲು ನೀವು ಮಾಡಿರುವ ಮನೆ ಮೇಲಿನ ಸಾಲವನ್ನು ಮಗನ ವಿದ್ಯಾಭ್ಯಾಸಕ್ಕೇ ಬಳಸಿದ್ದೀರಿ ಎನ್ನುವುದನ್ನು ಸಾಬೀತುಪಡಿಸಬೇಕು. ಅದಕ್ಕಾಗಿ ಬಿಲ್ ಸೇರಿದಂತೆ ಎಲ್ಲಾ ಪೂರಕ ದಾಖಲೆಗಳನ್ನು ಒದಗಿಸಿ ತೆರಿಗೆ ಅನುಕೂಲ ಪಡೆದುಕೊಳ್ಳಬಹುದು.

**3.) ನಾನು ರಾಯಚೂರು ನಿವಾಸಿ ಮಂಗಳ. 36 ವರ್ಷದ ಕೇಂದ್ರ ಸರ್ಕಾರಿ ಉದ್ಯೋಗಿ ಈಗಾಗಲೇ ನಾನು ಪೋಸ್ಟಲ್ ಲೈಫ್ ಇನ್ಶೂರನ್ಸ್, ಎಲ್ ಐ ಸಿ, ಸುಕನ್ಯಾ ಸಮೃದ್ಧಿ ಯೋಜನೆಗಳಲ್ಲಿ ಹಣ ಉಳಿತಾಯ ಮಾಡಿದ್ದೇನೆ. ಇನ್ನಿತರ ಉಳಿತಾಯ ಯೋಜನೆಗಳ ಬಗ್ಗೆ ಮಾಹಿತಿ ನೀಡಿ. ನನಗೆ ಸ್ವಂತ ಮನೆ ಕೊಳ್ಳುವ ಆಲೋಚನೆ ಇದೆ. ವೇತನವೇ ಆದಾಯದ ಮೂಲ. ಸೂಕ್ತ ಸಲಹೆ ನೀಡಿ.**

ಮಂಗಳ ಅವರೆ ನೀವು ಹೂಡಿಕೆ ಬಗ್ಗೆ ಮಾಹಿತಿ ಕೇಳಬೇಕಾದರೆ ಮೊದಲಿಗೆ ಆದಾಯ ಎಷ್ಟು ಉಳಿತಾಯ ಎಷ್ಟು ಎನ್ನುವುದನ್ನು ತಿಳಿಸಬೇಕು. ನೀವು ಈಗಾಗಲೇ ಮಾಡಿರುವ ಹೂಡಿಕೆಗಳು ಉತ್ತಮವಾಗಿವೆ. ಸಾಧ್ಯವಾದರೆ ಪಿಪಿಎಫ್ ನಲ್ಲಿ ಹೂಡಿಕೆ ಮಾಡಿ. ಇದರ ಹೂಡಿಕೆ ಅವಧಿ 15 ವರ್ಷವಿರೋದ್ರಿಂದ ತೆರಿಗೆ ಉಳಿಸುವ ಜೊತೆಗೆ ಹೆಚ್ಚು ಹಣ ಕ್ರೋಢೀಕರಿಸಲು ನಿಮಗೆ ಸಾಧ್ಯವಾಗುತ್ತದೆ. ಪಿಪಿಎಫ್ ನಿಂದ ಬರುವ ಹಣಕ್ಕೆ ಆದಾಯ ತೆರಿಗೆ ವಿನಾಯಿತಿ ಇದೆ. ವಾರ್ಷಿಕವಾಗಿ ಕನಿಷ್ಠ 500ರೂ. ನಿಂದ ಹಿಡಿದು ಗರಿಷ್ಠ 1.50 ಲಕ್ಷ ರೂಗಳ ವರೆಗೆ ಪಿಪಿಎಫ್ ನಲ್ಲಿ ಹೂಡಿಕೆ ಮಾಡಬಹುದು. ಕಡಿಮೆ ಪ್ರೀಮಿಯಂಗೆ ಹೆಚ್ಚು ಭದ್ರತೆ ಒದಗಿಸುವ ಟರ್ಮ್ ಇನ್ಶೂರನ್ಸ್ ಪ್ಲಾನ್ ನಲ್ಲಿ ಹೂಡಿಕೆ ಮಾಡುವ ಬಗ್ಗೆಯೂ ನೀವು ಯೋಚಿಸಬಹುದು. ವೇತನವೊಂದೇ ಆದಾಯದ ಮೂಲ ಎಂದು ನೀವು ತಿಳಿಸಿರುವ ಕಾರಣ ಟರ್ಮ್ ಲೈಫ್ ಇನ್ಶೂರನ್ಸ್ ಪಡೆದುಕೊಳ್ಳುವುದು ಉತ್ತಮ ಎನ್ನುವುದು ನನ್ನ ಸಲಹೆ. ವರ್ಷಕ್ಕೆ 12ರಿಂದ14 ಸಾವಿರ ರೂ. ಪ್ರೀಮಿಯಂ ಕಟ್ಟಿದರೆ ನಿಮಗೆ ಸುಮಾರು 1ಕೋಟಿ ಮೊತ್ತದಷ್ಟು ಇನ್ಶೂರನ್ಸ್ ಕವರೇಜ್ ಸಿಗುತ್ತದೆ. ಕುಟುಂಬದವರಿಗೆ ಹೆಲ್ತ್ ಇನ್ಶೂರನ್ಸ್ ಇಲ್ಲದಿದ್ದಲ್ಲಿ ಒಂದು ಹೆಲ್ತ್ ಪಾಲಿಸಿ ಮಾಡಿಸಿ. ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ ನೀವು ಗೃಹ ಸಾಲ ಮಾಡುವ ಬಗ್ಗೆ ಯೋಚಿಸಿ.

IndianMoney.com™
Be Wise, Get Rich

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111